



ಮಕ್ಕಳೊಂದಿಗೆ ತಮ್ಮ ಕಲ್ಪನೆಯ
ಗೆರೆಗಳೊಂದಿಗೆ ಜೀನ್ ಡೀಚ್

ಫಿಲ್ಮ್' ಎಂಬ ಗ್ರಾಹಕಸಂಸ್ಥೆಯ ಅಧಿಕಾರಿಗಳ ಒಡನಾಟ ಡೀಚ್ ಅವರಿಗೆ ವ್ಯಾವಹಾರಿಕವಾಗಿ ಇತ್ತು. ಜೆಕೊಸ್ಲೊವೇಕಿಯಾದ ಪ್ರಾಗ್‌ನಲ್ಲಿ ಇದ್ದ ಆ ಸಂಸ್ಥೆಗೂ ಅಮೆರಿಕದ ಇವರ ಸಂಸ್ಥೆಗೂ ನಂಟು. ಮುನ್ರೊ ಎಂಬ ಅನಿಮೇಟೆಡ್ ಥಿಯೇಟ್ರಿಕಲ್ ಪಾತ್ರವೊಂದನ್ನು ರೂಪಿಸಿ ಡೀಚ್ ಸ್ಕೆಚ್ ಬರೆದಿಟ್ಟಿದ್ದರು. ಅದನ್ನು ನಿರ್ಮಿಸಲು ರಾಂಬ್ರ್ಯಾಂಡ್ ಮುಂದೆ ಬಂದಿತು. 1959ನೇ ಇಸವಿಯ ಕೊನೆಯ ಕಾಲಘಟ್ಟದಲ್ಲಿ ಹತ್ತು ದಿನಗಳನ್ನಷ್ಟೆ ಪ್ರಾಗ್‌ನಲ್ಲಿ ಕಳೆದರೆ ಆಯಿತು ಎಂದುಕೊಂಡು ಕೆಲಸಕ್ಕೆ ಮುಂದಾದ ಡೀಚ್, ಅಲ್ಲಿ ಝ್ಡೆಂಕಾ ಎಂಬ ಯುವತಿಯ ಸೂಜಿಗಲ್ಲಿನ ಸೆಳೆತಕ್ಕೆ ಸಿಲುಕಿದರು. ಅಲ್ಲಿಗೇ ಸ್ಥಳಾಂತರಗೊಂಡರು. 1960ರಲ್ಲಿ 'ಮುನ್ರೊ' ಅನಿಮೇಟೆಡ್ ಥಿಯೇಟ್ರಿಕಲ್ ಮೊದಲ ಬಾರಿಗೆ ಪ್ರದರ್ಶಿತವಾಯಿತು. ಮರುವರ್ಷ ಶ್ರೇಷ್ಠ ಅನಿಮೇಟೆಡ್ ಕಿರುಚಿತ್ರ ಎಂಬ ಪ್ರಶಸ್ತಿ ಅದಕ್ಕೆ ಸಂದದ್ದೇ ಡೀಚ್ ಸೃಜನಶೀಲತೆಗೆ ಇಂಧನ ಸಿಕ್ಕಂತಾಯಿತು. ಯಾಕೆಂದರೆ, ಅಮೆರಿಕದ ಹೊರಗಿನ ದೇಶವೊಂದರ ನಿರ್ಮಾಣ ಸಂಸ್ಥೆ ಸಿದ್ಧಪಡಿಸಿದ ಯಾವ ಅನಿಮೇಟೆಡ್ ಕಿರುಚಿತ್ರಕ್ಕೂ ಅದಕ್ಕೆ ಮೊದಲು ಅಂಥದೊಂದು ಪ್ರಶಸ್ತಿ ಸಂದಿರಲಿಲ್ಲ. ಕಿಂಗ್ ಫೀಚರ್ಸ್ ಸಂಸ್ಥೆಯ ಜತೆಗೂಡಿ ಟೆಲಿವಿಷನ್ ಗಾಗಿ 'ಪೊಪೆಯೆ ಕಾರ್ಟೂನ್ಸ್' ನಿರ್ದೇಶನದಲ್ಲಿ ಡೀಚ್ 1960ರಿಂದ 63ರ ವರೆಗೆ ತೊಡಗಿಸಿಕೊಂಡರು.

1961ರಿಂದ 62ರ ಅವಧಿಯಲ್ಲಿ 'ಮೆಟ್ರೊಮೇಯರ್ ಗೋಲ್ಡ್ ವಿನ್ ಮೇಯರ್ ಸ್ಟುಡಿಯೋಸ್' (ಎಂಜಿಎಂ)ಗಾಗಿ ಟಾಮ್ ಅಂಡ್ ಜೆರ್ರಿ ಸರಣಿಯ 13 ಅನಿಮೇಟೆಡ್ ಕಿರುಚಿತ್ರಗಳನ್ನು ನಿರ್ದೇಶಿಸಿದರು. ಯುಪಿಎಯಲ್ಲಿ ವಿದ್ಯಾರ್ಥಿಯಾಗಿದ್ದಾಗ, ಅಲ್ಲಿನ ಸಿಬ್ಬಂದಿ ಅನಗತ್ಯವಾಗಿ ಹಿಂಸಿಸುತ್ತಿದ್ದರು ಎಂದು ಆಪ್ತೇಷ್ಟರಲ್ಲಿ ಡೀಚ್ ಹೇಳಿಕೊಂಡಿದ್ದರು. ಮನುಷ್ಯ ಸಹಜವಾದ ತುಮುಲಗಳ ಉತ್ಪ್ರೇಕ್ಷಿತ ದನಿಯಾಗಿ ಟಾಮ್ ಅಂಡ್ ಜೆರ್ರಿ ಅವರ ತಲೆಯಲ್ಲಿ ಮೊಳೆಯಿತಂತೆ. ಬೆಕ್ಕನ್ನು ಕಂಡರೆ ಇಲಿ ಹೆದರಬೇಕಲ್ಲ. ಆದರೆ, ಅವರು ಇಲಿಯನ್ನೇ ಶಾಣ್ಯಾ ಮಾಡಿಬಿಟ್ಟರು. ಬೆಕ್ಕಿನ ಪಾತ್ರ ಹೈರಾಣಾಗಬೇಕು. ಈ ಪರಿಕಲ್ಪನೆ ಜಗತ್ತಿನ ಎಷ್ಟೋ ಜನರನ್ನು ಹಿಡಿದಿಟ್ಟುಕೊಂಡಿದ್ದು ಇವತ್ತು ಬಹುತೇಕರಿಗೆ ತಿಳಿದೇ ಇದೆ. 'ಡೇವಿಡ್ ಅಂಡ್ ಗೊಲಿಯಾತ್'ನಲ್ಲೂ ಕೃಶನಾಗಿ ಕಾಣುವ ವ್ಯಕ್ತಿ ವಿಜಯಿಯಾಗಬೇಕು ಎಂಬ ಪರಿಕಲ್ಪನೆಯನ್ನು ಅವರು ತುಂಬಿದರು.

ಟಾಮ್ ಅಂಡ್ ಜೆರ್ರಿಯ ಕೆಲವು ಕಂತುಗಳನ್ನು ನೋಡಿದ ನಂತರವೇ ಅನೇಕ ಅಭಿಮಾನಿಗಳು ಡೀಚ್ ಅವರಿಗೆ ಮೆಚ್ಚುಗೆಯ ಪತ್ರಗಳನ್ನು ಬರೆದರು. ಅದರ ಯಶಸ್ಸಿನ ಅಲೆಮೇಲೆ ಏರಿಯೇ 'ಕ್ರೇಜಿ ಕ್ಯಾಟ್' ಎಂಬ ನಿರ್ಮಾಪಕನ ಜೊತೆಗೂಡಿ ಚಿತ್ರಿಸಿದರು. ಡೀಚ್ ಅವರದ್ದೇ ಆಲೋಚನೆಗಳನ್ನು ಒಳಗೊಂಡ 'ದಿ ಬ್ಲಫರ್ಸ್' ಕೂಡ ಪ್ರಸಾರವಾಯಿತು. 1966ರಲ್ಲಿ 'ಅಲೀಸ್ ಆಫ್ ವಂಡರ್ ಲ್ಯಾಂಡ್' ಅನಿಮೇಟೆಡ್ ಚಿತ್ರವನ್ನು ಪ್ಯಾರಿಸ್‌ನಲ್ಲಿ ಚಿತ್ರೀಕರಿಸಿದರು. 'ದಿ ಹಾಬಿಟ್' ಎಂಬ ಇನ್ನೊಂದು ಫೀಚರ್ ಲೆಂಗ್ತ್ ಅನಿಮೇಟೆಡ್ ಫಿಲ್ಮ್ ರೂಪಾಂತರವನ್ನು ಸಾಧ್ಯಮಾಡಿದ್ದೂ ಅದೇ ಕಾಲಘಟ್ಟದಲ್ಲಿ. ಆ ಸವಾಲಿನ ಕೆಲಸವನ್ನು ಚೆಕ್ ಗಣರಾಜ್ಯದ, ಆ ಕಾಲದ ಹೆಸರಾಂತ ಅನಿಮೇಟರ್ ಜಿರಿ ಟ್ರಂಕಾ ಅವರೊಟ್ಟಿಗೆ ಮಾಡಿದರೆನ್ನುವುದು ಉಲ್ಲೇಖನೀಯ.

ಬೆಕ್ಕು–ಇಲಿಯ ಆಟವನ್ನು ತಲೆಮಾರುಗಟ್ಟಲೆ ಮಕ್ಕಳು ನೋಡುತ್ತಲೇ ಬಂದಿದ್ದಾರೆ. ಮಕ್ಕಳ ಜೊತೆಗೆ ದೊಡ್ಡವರೂ ಮಗುವಾಗಿ ಆ ಸರಣಿಗಳಿಗೆ ಕಣ್ಣು ಕೀಲಿಸಿದ್ದಿದೆ. 1969ರಿಂದ 2008ರವರೆಗೆ ಡೀಚ್ ಕಾರ್ಯತತ್ಪರರಾಗಿಯೇ ಇದ್ದರು. 'ಕನೆಕ್ಟಿಕಟ್ ಆರ್ಗನೈಜೇಷನ್ ವೆಸ್ಟನ್ ವುಡ್ ಸ್ಟುಡಿಯೋಸ್'ನ ಅನಿಮೇಷನ್ ನಿರ್ದೇಶಕರಾಗಿ ಅವರು ಅಷ್ಟು ಸುದೀರ್ಘ ಕಾಲ ತೊಡಗಿಸಿಕೊಂಡರು. ಮಕ್ಕಳ ಪಿಕ್ಚರ್ ಬುಕ್‌ಗಳನ್ನು ಆಧರಿಸಿದ ಎಷ್ಟೋ ಅನಿಮೇಷನ್ ಸರಣಿಗಳನ್ನು ರೂಪಿಸಿದರು. 1969ರಲ್ಲಿ ಡ್ರಮ್ಮರ್ ಹಾಫ್ ವಿರಚಿತ ಪಿಕ್ಚರ್ ಬುಕ್ ಅನ್ನು ಬೆರಗಿನಿಂದ ನೋಡಿ ಅದನ್ನು ರೂಪಾಂತರ ಮಾಡಿದ್ದ ಅವರು, 2998ರಲ್ಲಿ 'ವೋಯೇಜ್ ಟು ಬನ್ನಿ ಪ್ಲಾನೆಟ್' ಪುಸ್ತಕವನ್ನೂ ಅಷ್ಟೇ ಕಣ್ಣರಳಿಸಿ ನೋಡಿ ಟಿ.ವಿ. ಸರಣಿಯಾಗಿಸಬಹುದು ಎಂದು ತಲೆಯಾಡಿಸಿದ್ದರು.

2003ರಲ್ಲಿ ಅವರಿಗೆ ಎಎಸ್‌ಐಎಫ್‌ಎ–ಹಾಲಿವುಡ್ 'ಆನಿ ಅವಾರ್ಡ್ಸ್ ವಿನ್ಸರ್ ಮೆಕೆ ಅವಾರ್ಡ್' ನೀಡಿ ಗೌರವಿಸಿತು. ಅನಿಮೇಷನ್ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಗಾಗಿ ಸಂದ ಜೀವಮಾನದ ಪ್ರಶಸ್ತಿ ಅದು. ಮೊದಲ ಹೆಂಡತಿ ಮೇರಿಗೆ ಮೂರು ಗಂಡುಮಕ್ಕಳನ್ನು ಕೊಟ್ಟ ಡೀಚ್, ಎರಡನೇ ಹೆಂಡತಿ ಝ್ಡೆಂಕಾ ಜತೆಗೆ ಭರಪೂರ ಪ್ರೀತಿಯ ಬದುಕು ಕಟ್ಟಿಕೊಂಡರು. ಅನಿಮೇಷನ್ ವೃತ್ತಿಜೀವನ ಹದಕ್ಕೆ ಬಂದ ಸಂದರ್ಭದಲ್ಲಿ ಅಂಕುರಿಸಿದ ಪ್ರೇಮವಿವಾಹ ಅದು. ಕರುಳು ಸಂಬಂಧಿ ಸಮಸ್ಯೆಗಳಿಗೆ ಚಿಕಿತ್ಸೆ ಪಡೆದರೂ ಡೀಚ್ ಗುಣಮುಖರಾಗಲಿಲ್ಲ. ಇದೇ ಏಪ್ರಿಲ್ 16ಕ್ಕೆ 95 ವರ್ಷಗಳ ಅವರ ತುಂಬು ಬದುಕು ಪೂರ್ಣವಿರಾಮ ಕಂಡಿತು. 'ಟಾಮ್ ಆ್ಯಂಡ್ ಜೆರ್ರಿ' ಮಾತ್ರ ಈಗಲೂ ಟಿ.ವಿ. ವಾಹಿನಿಗಳಲ್ಲಿ ಚಲಿಸುತ್ತಲೇ ಇವೆ! ■